


## ಪಾಶ್ಚಾತ್ಯ ಉಡುಗೆ ಬೇಡ

ರಾಜ್ಯೋತ್ಸವ ಬಣ್ಣದ ಉಡುಗೆಗಳು ನಮ್ಮ ನೆಲದ ಸಂಸ್ಕೃತಿ ಸಂಭ್ರಮವನ್ನು ಬಿಂಬಿಸುವಂತಿರಬೇಕು. ಉಡುಪು ಸಾಂಪ್ರದಾಯಿಕವೇ ಆಗಿರಲಿ, ಆಧುನಿಕದ್ದೇ ಇರಲಿ, ನಮ್ಮ ನಾಡಿನ ಕಲೆ ಸಂಸ್ಕೃತಿಯೊಂದಿಗೆ ಬೆಸೆದುಕೊಂಡರೆ ನಾಡಹಬ್ಬ ಕಳೆಕಟ್ಟಿದಂತೆಯೇ. ಈ ಸಂದರ್ಭದಲ್ಲಿ ಆದಷ್ಟು ಸಾಂಪ್ರದಾಯಿಕ ಉಡುಗೆಗೇ ಆದ್ಯತೆ ಇರಲಿ, ಪಾಶ್ಚಾತ್ಯ ಉಡುಪಿಗೆ ಸ್ವಲ್ಪ ಬ್ರೇಕ್ ಕೊಡಿ ಎಂದು ಹೇಳುತ್ತಾರೆ ಬೆಂಗಳೂರಿನ ಫ್ಯಾಷನ್ ಹಾಗೂ ಸೌಂದರ್ಯ ತಜ್ಞೆ, ಉಮಾ ಜಯಕುಮಾರ್.

'ರಾಜ್ಯೋತ್ಸವ ವೇಳೆ ದೇಸಿ ಉಡುಪುಗಳ ಮೊರೆ ಹೋಗಿ. ಇದರಿಂದ ಏಕತೆ ಸಾಧಿಸಬಹುದು. ಒಂದೇ ರೀತಿಯ ಉಡುಗೆಗಳು 'ನಾವೆಲ್ಲ ಒಂದೇ' ಎಂಬ ಭಾವನೆಯನ್ನು ಬಿಂಬಿಸಲೂ ಸಹಕಾರಿ. ಇದಕ್ಕಾಗಿ ಡ್ರೆಸ್‌ಕೋಡ್ ಪಾಲಿಸಿ' ಎಂದು ಸಲಹೆ ನೀಡುತ್ತಾರೆ ಅವರು.

'ಉಡುಪಿಗೆ ತಕ್ಕ ಹಾಗೆ ಒಡವೆಯನ್ನೂ ಮ್ಯಾಚ್ ಮಾಡಿಕೊಳ್ಳಿ. ಕೆಂಪು–ಹಳದಿ ಬಣ್ಣದ ಉಡುಗೆಯನ್ನು ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಿ. ಬಳೆ, ಕಿವಿಯೋಲೆ ಸರ ಎಲ್ಲವನ್ನೂ ಉಡುಪಿಗೆ ತಕ್ಕ ಹಾಗೆ ಆಯ್ದು ಬಳಸಿ. ಒಂದೇ ವರ್ಣದ ಸ್ಟೇಟ್‌ಮೆಂಟ್ ಆಭರಣವನ್ನೂ ತೊಡಬಹುದು. ಇದರಿಂದ ಸಖತ್ ಲುಕ್ ಪಡೆಯಬಹುದು' ಎಂಬುದು ಉಮಾ ಜಯಕುಮಾರ್ ಅವರ ಸಲಹೆ.

ಸಂದರ್ಭದಲ್ಲಿ ನಡೆಯುವ ಪಥಸಂಚಲನ, ನೃತ್ಯ, ಸ್ಕಿಟ್, ಮಿನಿ ನಾಟಕ ಮುಂತಾದ ವೇಳೆ ಮಕ್ಕಳಿಗೆ ತುಂಬ ಸೊಗಸಾಗಿ ಕಾಣುತ್ತದೆ. ಉಡುಪಿಗೆ ತಕ್ಕ ಆ್ಯಕ್ಸೆಸರೀಸ್ ಧರಿಸಿದರೆ ಉಡುಪಿಗೆ ಮತ್ತಷ್ಟು ಲುಕ್, ಹೊಸ ಕಳೆ ಬರುವುದಂತೂ ಗ್ಯಾರಂಟಿ. ಈಗೀಗಂತೂ ಬಳೆಗಳು, ಬ್ಯಾಂಡ್, ಬಿಂದಿ, ಕಿವಿಯೋಲೆ ಎಲ್ಲವೂ ಕೆಂಪು–ಹಳದಿ ಕಾಂಬಿನೇಷನ್‌ನವು ಸಿಗುತ್ತವೆ. ನುಡಿಹಬ್ಬವನ್ನು ಸಂಭ್ರಮಿಸಲು ಇದಕ್ಕಿಂತ ಇನ್ನೇನು ಬೇಕು?' ಎಂದು ಪ್ರಶ್ನಿಸುತ್ತಾರೆ ಬೆಂಗಳೂರಿನ ಫ್ಯಾಷನ್ ತಜ್ಞೆ ಆರತಿ ರಮೇಶ್.

'ಈ ಬಣ್ಣಗಳ ಕಾಂಬಿನೇಷನ್‌ನ ಉಡುಪು ಹಾಗೂ ಒಡವೆಗಳನ್ನು ಯುವತಿಯರೂ ಇಷ್ಟಪಡುತ್ತಾರೆ. 'ಮಿಕ್ಸ್ ಅಂಡ್ ಮ್ಯಾಚ್' ಮಾಡಲೂ ಇದು ಸಹಕಾರಿ. ಜೊತೆಗೆ ಪುರುಷರು ಸಹ ಟೀ ಶರ್ಟ್‌ಗಳಲ್ಲಿ ಕನ್ನಡ ನಾಣ್ಣುಡಿಗಳನ್ನು ಬರೆಸಿ ಧರಿಸಿಕೊಂಡು ಕನ್ನಡದ ಹೆಮ್ಮೆಯನ್ನು ಬಿಂಬಿಸಬಹುದು' ಎನ್ನುತ್ತಾರೆ ಅವರು.

### ಮ್ಯಾಚಿಂಗ್ ಸೆನ್ಸ್

ಉಡುಪುಗಳನ್ನು ತೊಡುವಾಗ ನಮಗೆ ಮ್ಯಾಚಿಂಗ್ ಸೆನ್ಸ್ ಇರಲೇಬೇಕು. ಯಾವ ಬಣ್ಣದ ಉಡುಗೆ ತೊಟ್ಟಾಗ ಯಾವ ರೀತಿಯ ಕಾಂಬಿನೇಷನ್‌ನ ಆ್ಯಕ್ಸೆಸರೀಸ್ ಬಳಸಬೇಕು? ಹೇಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಬೇಕು? ಯಾವ ಟಾಪ್‌ಗೆ ಯಾವ ಬಣ್ಣದ ಬಾಟಮ್ ಸೂಕ್ತ? ಎಂಬುದರ ಅರಿವು ಇದ್ದರೆ ಖಂಡಿತಾ ಫ್ಯಾಷನಬಲ್ ಆಗಿ ಕಾಣಬಹುದು. ಕೆಂಪು, ಹಳದಿ ಬಣ್ಣಗಳ ಸಲ್ವಾರ್ ತೊಡುವುದಾದರೆ ಫ್ಯಾಬ್ರಿಕ್ ಸಾಫ್ಟ್ ಆಗಿದ್ದರೆ ಸೂಕ್ತ. ಇದೇ ಬಣ್ಣಗಳ ಕಾಂಬಿನೇಷನ್‌ನಲ್ಲಿ ಕುರ್ತಿ ಧರಿಸಲು ಆಸಕ್ತಿ ಇದ್ದರೆ ಟಾಪ್ ಹಳದಿ ಹಾಗೂ ಬಾಟಮ್‌ಗೆ ಕೆಂಪು ಬಣ್ಣದ ಲೆಗಿಂಗ್ ಸೂಕ್ತ. ಇದೇ ಬಣ್ಣಗಳನ್ನು ಉಲ್ಟಾದಲ್ಲಿ (ಕೆಂಪು ಟಾಪ್, ಹಳದಿ ಬಾಟಮ್) ಕೂಡ ಧರಿಸಬಹುದು. ಆಗ ಸುಂದರವಾಗಿ ಕಾಣಲು ಸಾಧ್ಯ.

ಕೆಂಪು–ಹಳದಿ ಕಾಂಬಿನೇಶನ್‌ಗಳ ರೇಷ್ಮೆ ಸೀರೆ ಬಹಳ ಆಕರ್ಷಕವಾಗಿ ಕಾಣುತ್ತದೆ. ಕಿತ್ತಳೆ ಬಣ್ಣಕ್ಕೆ ಕೆಂಪು ಶೇಡ್ ಇರುವ ಬಣ್ಣದ ಸೀರೆ ಅಥವಾ ಸಲ್ವಾರ್‌ಗೆ ಹಳದಿ ಬಣ್ಣದ ರವಿಕೆ ಅಥವಾ ಸಲ್ವಾರ್ ದುಪಟ್ಟಾ ಸಖತ್ ಲುಕ್ ಕೊಡುತ್ತದೆ. ರೇಷ್ಮೆ ಬಟ್ಟೆ ಆದರೆ ಹೊಳಪಿನ ಜೊತೆಗೆ ಇತರ ವರ್ಣ ಸಂಯೋಜನೆಯೂ ಆಕರ್ಷಕವಾಗಿದ್ದು, ಇದರಲ್ಲಿ ಥ್ರೆಡ್ ವರ್ಕ್, ಕುಂದನ್, ಚಮ್ಕಿ ಇರುವ ಡಿಸೈನ್ ಎಲಿಗೆಂಟ್ ಲುಕ್ ಕೊಡುತ್ತದೆ. ಇದಕ್ಕೆ ಮ್ಯಾಚಿಂಗ್ ಅಥವಾ ಕಾಂಟ್ರಾಸ್ಟ್ ಆದ ಕಿವಿಯೋಲೆ, ಮಿನುಗುವ ಮಣಿಮಾಲೆ ಧರಿಸಿದರೆ ಮತ್ತಷ್ಟು ಚೆನ್ನಾಗಿ ಕಾಣಬಹುದು.

ಫ್ಯಾಬ್ರಿಕ್‌ನಲ್ಲಿ ವರ್ಣ ಸಂಯೋಜನೆ ಮಾಡುವುದು ಒಂದು ಕಲೆ. ಬಣ್ಣದ ಆಯ್ಕೆ ವ್ಯಕ್ತಿಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎನ್ನುತ್ತಾರೆ ಮನೋವಿಜ್ಞಾನಿಗಳು. ಹಳದಿ, ಕೆಂಪು ಮತ್ತು ಹಸಿರು ತಜ್ಞರ ಪ್ರಕಾರ ಬೆಚ್ಚಗಿನ ಬಣ್ಣಗಳು. ಕಡುಗೆಂಪು ಲೆಗಿಂಗ್ ಮೇಲೆ ದಟ್ಟ ಹಳದಿ, ತಿಳಿಹಳದಿ ಬಣ್ಣದ ಟಾಪ್, ಕುರ್ತಿ, ಲಾಂಗ್ ಶರ್ಟ್ ಎಲ್ಲ ವೈವಿಧ್ಯಗಳೂ ಪ್ಲೆಸೆಂಟ್ ಲುಕ್ ಕೊಡಲು ಸಹಕಾರಿ. ಕೆಂಪು ಬಣ್ಣ ಪ್ರೀತಿಯ ಸಂಕೇತ. ಈ ಬಣ್ಣ ಸೃಜನಾತ್ಮಕ, ಶಕ್ತಿ ಪ್ರಚೋದಕ. ಆರೋಗ್ಯದ ನಿಟ್ಟಿನಲ್ಲೂ ಕೆಂಪು ಪ್ರಮುಖ ಬಣ್ಣ. ಕೆಂಪು ರಕ್ತ ಕಣಗಳ ರಚನೆ ದೇಹ ನಿರ್ವಹಣೆಗೆ ಅತ್ಯಗತ್ಯ. ಕ್ರಿಸ್‌ಮಸ್ ಹಬ್ಬಕ್ಕೆ ಕೆಂಪು ಉಡುಗೆಯೇ ಪ್ರಧಾನ. ಹೀಗೆ ಕೆಂಪು ಬಣ್ಣವೂ ವಿವಿಧ ಬಣ್ಣಗಳೊಡಗೂಡಿ ಹಬ್ಬಗಳಿಗೆ, ಫ್ಯಾಷನ್‌ಗೆ ತನ್ನ ಸಂಬಂಧವನ್ನು ತಳುಕು ಹಾಕಿಕೊಂಡಿದೆ.

'ಹಳದಿ ಮತ್ತು ಕೆಂಪು ಬಣ್ಣಗಳೆರಡೂ 'ಕನ್ನಡ ಬಣ್ಣ' ಎಂದೇ ಜನಜನಿತ. ಹಳದಿ ಬಣ್ಣ ಆಧ್ಯಾತ್ಮಿಕ ಬೆಳವಣಿಗೆ ಸೂಚಕ ಬಣ್ಣ. ತಿಳಿ ಹಳದಿ ಮನಸ್ಸನ್ನು ಶಾಂತಿಯತ್ತ ಕೊಂಡೊಯ್ಯುತ್ತದೆ. ನೆಮ್ಮದಿ ನೀಡುತ್ತದೆ. ಹೀಗಾಗಿ ಶಾಲೆ, ವಿಶ್ವವಿದ್ಯಾಲಯ ಕಟ್ಟಡಗಳ ಗೋಡೆಗಳಿಗೆ ಹಳದಿ ಬಣ್ಣವನ್ನೇ ಬಳಿಯಲಾಗುತ್ತದೆ. ಮನೆಗಳಲ್ಲೂ ಮಕ್ಕಳ ಮಲಗುವ ಕೋಣೆಗೆ ಕಡುಹಳದಿ ಬಣ್ಣ ಸೂಕ್ತ. ಇದೇ ಬಣ್ಣ ಫ್ಯಾಷನ್ ಉಡುಪುಗಳಿಗೂ ಹೇಳಿ ಮಾಡಿಸಿದ್ದು' ಎನ್ನುತ್ತಾರೆ ತಜ್ಞರು.

ನವೆಂಬರ್ ಒಂದರಿಂದ ಮೂವತ್ತು ಕನ್ನಡ ಮಾಸ. ಇಡೀ ತಿಂಗಳು 'ಕನ್ನಡ ಬಣ್ಣ'ದ ಉಡುಪು ತೊಟ್ಟು ಸಂಭ್ರಮಿಸಬಹುದು. ಫ್ಯಾಷನ್ ಲೋಕವೂ ಈ ನಿಟ್ಟಿನಲ್ಲಿ ಸಜ್ಜಾಗಿದೆ. ಕೆಂಪು–ಹಳದಿ ರಾಗರಂಗು ಫ್ಯಾಷನ್‌ಪ್ರಿಯರೊಂದಿಗೆ ಅನನ್ಯ ನಂಟು ಬೆಳೆಸಿಕೊಂಡು ಸಖತ್ತಾಗಿ ಮಿಂಚಲು ಸಜ್ಜಾಗಿದೆ. ■